ಮೆ : ವಿ.ಬಿ.ಸಿ. ಫೆರೋ ಅಲಾಯ್ಸಿ ಸಂಸ್ಥೆಯಿಂದ 600 ಮೆಗಾ ವ್ಯಾಟ್‌ಗಳಷ್ಟು ವಿದ್ಯುತ್ತನ್ನು ಹಂತ ಹಂತವಾಗಿ ಪಡೆಯಲು ಇಂಗಿತ ಪತ್ರ (LOI) ವನ್ನು ನೀಡಲಾಗಿರುತ್ತದೆ.

ದೀರ್ಘಕಾಲಿಕ ಕ್ರಮಗಳು:

ಸ್ಪರ್ಧಾತ್ಮಕ ಬಿಡ್ ಮೂಲಕ (ರಾಜ್ಯದಲ್ಲಿ):

1. 1320 ಮೆಗಾವ್ಯಾಟ್ ಶಾಖೋತ್ಪನ್ನ ಘಟಕ– ಗುಲ್ಬರ್ಗಾದಲ್ಲಿ 12ನೇ ಯೋಜನಾವಧಿಯಲ್ಲಿ ಕಾರ್ಯಾರಂಭ ಅಂದಾಜಿಸಲಾಗಿದೆ.
2. 1320 ಮೆಗಾವ್ಯಾಟ್ ಶಾಖೋತ್ಪನ್ನ ಘಟಕ – ಘಟಪ್ರಭಾದಲ್ಲಿ 12 ನೇ ಯೋಜನಾವಧಿಯಲ್ಲಿ ಕಾರ್ಯರಂಭ ಅಂದಾಜಿಸಲಾಗಿದೆ.

<u>ಕರ್ನಾಟಕ ವಿಧಾನ ಸಭೆ</u>

172 ಶ್ರೀ ಗೋಪಾಲಕೃಷ್ಣ ಬೇಳೂರು (ಸಾಗರ)
ಇಂಧನ ಸಚಿವರು.

****

ಅ) ಸಾಗರ ತಾಲ್ಲೂಕು ಜೋಗದಲ್ಲಿರುವ ಶರಾವತಿ ವಿದ್ಯುತ್ ಯೋಜನೆಯಿಂದ ನೂರಾರು ಕೋಟಿ ರೂ.ಗಳ ಆದಾಯ ಬರುತ್ತಿದ್ದು ಹಾಗೂ ನಾಡಿಗೆ ಬೆಳಕು ನೀಡುತ್ತಿರುವುದು ನಿಜವಲ್ಲವೇ;

ಅ) ಶರಾವತಿ ಜಲ ವಿದ್ಯುತ್ ಯೋಜನೆಯಿಂದ ಕರ್ನಾಟಕ ರಾಜ್ಯಕ್ಕೆ ವಿದ್ಯುತ್ ಸರಬರಾಜಾಗುತ್ತಿದ್ದು, ಈ ಯೋಜನೆ ಕರ್ನಾಟಕದ ಬಹುಮುಖ್ಯವಾದ ವಿದ್ಯುತ್ ಉತ್ಪಾದನಾ ಕೇಂದ್ರವಾಗಿರುವುದು ಹೆಮ್ಮೆಯ ವಿಷಯವಾಗಿದೆ. ಈ ಯೋಜನೆಯಡಿ ಉತ್ಪಾದಿಸಲಾಗುವ ವಿದ್ಯುಚ್ಛಕ್ತಿಯ ಜೊತೆಗೆ ರಾಜ್ಯದ ಇತರ ಭಾಗಗಳಾದ ರಾಯಚೂರು, ಬಳ್ಳಾರಿ, ನಾಗಝರಿ (ಕಾಳಿ ಯೋಜನೆ), ವರಾಹಿ, ಆಲಮಟ್ಟಿ ಇತ್ಯಾದಿ ಹಾಗೂ ಕೇಂದ್ರ ಸರ್ಕಾರದ ಯೋಜನೆಯಾದ ಕೈಗಾ ಅಣು ವಿದ್ಯುತ್ ಸ್ಥಾವರದಿಂದ ಉತ್ಪಾದಿಸಲಾಗುತ್ತಿರುವ ವಿದ್ಯುತ್ ಹಾಗೂ ಕೇಂದ್ರ ಯೋಜನೆಗಳಿಂದ ಲಭ್ಯವಾಗುವ ರಾಜ್ಯದ ಪಾಲು ಹಾಗೂ ಖಾಸಗಿ ವಿದ್ಯುತ್ ಉತ್ಪಾದಕರಿಂದ ಪಡೆಯುವ ವಿದ್ಯುತ್ತ್ತನ್ನು ಕ್ರೋಢೀಕರಿಸಿ, ಲಭ್ಯತೆ ಹಾಗೂ ಬೇಡಿಕೆಗೆ ಅನುಗುಣವಾಗಿ ರಾಜ್ಯದ ಎಲ್ಲಾ ಭಾಗಗಳಿಗೆ ಕರ್ನಾಟಕ ಸರ್ಕಾರವು ವಿದ್ಯುತ್ ಸರಬರಾಜು ಕಂಪನಿವಾರು ಹಂಚಿರುತ್ತದೆ. ಈ ಹಂಚಿಕೆಯ ಪ್ರಕಾರ ವಿದ್ಯುತ್ ಸರಬರಾಜು ಮಾಡಲಾಗುತ್ತದೆ.

ಆ) ಈ ಭಾಗಕ್ಕೆ ನಿರಂತರವಾಗಿ ವಿದ್ಯುತ್ ಸರಬರಾಜು ಮಾಡುವ ವಿಶೇಷ ಯೋಜನೆಗಳನ್ನು ರೂಪಿಸಲಾಗಿದೆಯೇ?

ಪ್ರಸ್ತುತ ಸಾಗರ ತಾಲ್ಲೂಕಿನ ನಗರ ಪ್ರದೇಶಗಳಲ್ಲಿ ದಿನದ 24 ಗಂಟೆಗಳ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ದಿನದ 6 ಗಂಟೆಗಳ ಅವಧಿಯಲ್ಲಿ 3 ಫೇಸ್ ಹಾಗೂ 6 ಗಂಟೆಗಳ ಅವಧಿಯಲ್ಲಿ ಸಿಂಗಲ್ ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ.

ಅಧಿಕ ಕೃಷಿ ನೀರಾವರಿ ಪಂಪುಸೆಟ್ಟುಗಳನ್ನು ಹೊಂದಿರುವ ಗೌತಮಪುರ ಹಾಗೂ ಉಲ್ಲೂರು 11 ಕೆ.ವಿ. ಫೀಟರ್ ಗಳನ್ನು ಗುರುತಿಸಿ ಆರ್.ಎಲ್.ಎಂ.ಎಸ್. ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯ ಅನುಷ್ಠಾನಗೊಂಡ ನಂತರ ಗೌತಮಪುರ ಹಾಗೂ ಉಲ್ಲೂರು 11 ಕೆ.ವಿ. ಫೀಡರ್‌ಗಳಿಂದ ವಿದ್ಯುತ್ ಸರಬರಾಜಾಗುವ ಗ್ರಾಮಾಂತರ ಪ್ರದೇಶಗಳಲ್ಲಿನ ವಾಸದ ಮನೆಗಳಿಗೆ ದಿನದ ಎಲ್ಲಾ ಸಮಯದಲ್ಲಿ ನಿರಂತರ ವಿದ್ಯುತ್ ಸರಬರಾಜು ಮಾಡಲು ಸಾಧ್ಯವಾಗುವುದು.

ಸಂಖ್ಯೆ: ಇಎನ್ 15 ಪಿಪಿಎಂ 2009

(ಕೆ.ಎಸ್.ಈಶ್ವರಪ್ಪ)
ಇಂಧನ ಸಚಿವರು.

ಕರ್ನಾಟಕ ವಿಧಾನ ಸಭೆ

172 ಶ್ರೀ ಗೋಪಾಲಕೃಷ್ಣ ಬೇಳೂರು (ಸಾಗರ)

ಅ) ಸಾಗರ ವಿಧಾನಸಭಾ ಕ್ಷೇತ್ರದಲ್ಲಿ ಭೂಸೇನಾ ನಿಗಮಕ್ಕೆ ವಹಿಸಲಾಗಿರುವ ಕಾಮಗಾರಿಗಳಾವುವು (ಕಳೆದ 3 ವರ್ಷಗಳ ಮಾಹಿತಿ ನೀಡುವುದು);

ಅನುಬಂದ–1ರಲ್ಲಿ ವಿವರ ನೀಡಿದೆ.

ಆ) ಈ ನಿಗಮವು ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

– ಇಲ್ಲ –

ಇ) ಬಂದಿದ್ದಲ್ಲಿ, ಈ ನಿಗಮದ ವಿರುದ್ಧ ಕೈಗೊಂಡಿರುವ ಕ್ರಮಗಳಾವುವು?

ಉದ್ಭವಿಸುವುದಿಲ್ಲ.

ಸಂ: ಗ್ರಾಅಪ 44 ಇಜಿಎಸ್(ಕಭೂನಿ)2009 ದಿನಾಂಕ:24.02.2009

(ಶೋಭಾ ಕರಂದ್ಲಾಜೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು